ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯುತ್ತದೆ. ನಾವೇನು ಹೇಳಬೇಕೋ ಹೇಳುತ್ತೇವೆ. ಇಲ್ಲವಾದಲ್ಲಿ ಈ ಆದೇಶವನ್ನು ವಿತ್‌ಡ್ರಾ ಮಾಡುತ್ತೇವೆಂದು ಹೇಳಿ ಇದನ್ನು ಇಲ್ಲಿಗೇ ಇತ್ಯರ್ಥ ಮಾಡೋಣ.

ಶ್ರೀ ಶ್ರೀರಂಗದೇವರಾಯಲು: ಇದರ ಕೀರ್ತಿ ಎಲ್ಲಾ ಮಾನ್ಯ ಮದನಗೋಪಾಲ್ ಅವರಿಗೆ ಹೋಗಬೇಕು. ಅವರು ಜೆಮ್ ಗ್ಯಾನೈಟ್‌ನವರ ಪರ್ಮಿಟ್ ಕ್ಯಾನ್ಸಲ್ ಮಾಡಿ ಅವರು ಎಲ್ಲವನ್ನೂ ಹೊರಗೆ ತಂದದ್ದಕ್ಕೋಸ್ಕರ ನಾವೆಲ್ಲರೂ ಟೀಕೆ ಮಾಡುತ್ತಿದ್ದೇವೆ. ಇದರ ಕೀರ್ತಿ ಅವರಿಗೇ ಸಲ್ಲಬೇಕು

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕರ್ನಾಟಕಕ್ಕೇನು ಕಾಟವೋ ಗೊತ್ತಿಲ್ಲ ಅಲ್ಲಿ ವೀರಪ್ಪನ್ ಇಲ್ಲಿ ವೀರಮಣಿ. ನನಗಂತೂ ಗೊತ್ತಿಲ್ಲ. ಯಾರ್ಯಾರು ಕೆಟ್ಟ ಕೆಲಸ ಮಾಡುತ್ತಾರೆ ಅವರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಕುಳಿತಿದ್ದೇವೆ. ಪರಿಣಾಮಕಾರಿಯಾದ ವಿಚಾರಗಳ ಬಗ್ಗೆ ನಾವು ಯೋಚನೆ ಮಾಡಲಿಲ್ಲ. ಯಾರು ಹಣ ಹೊಡೆದಿದ್ದಾರೆ ಇದರ ಕಡೆಗೆ ಸರ್ಕಾರದ ನಡವಳಿಕೆ ಏನು ರೆಲವೆಂಟ್ ಆಗಿದೆ ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ನಾನೇನೂ ಕಾನೂನು ಪಂಡಿತನಲ್ಲ. ಆದರೆ ಕಾನೂನುಗಳ ಬಗ್ಗೆ ನನ್ನ ಅಕ್ಕ ಪಕ್ಕ ಮಾತನಾಡಿದಂತಹ ಎಲ್ಲಾ ಸ್ನೇಹಿತರ ವಿಚಾರಗಳನ್ನೂ ಸಂಗ್ರಹ ಮಾಡಿದಾಗ ಸರಕಾರ ತನ್ನ ಕಾರ್ಯಕ್ರಮವನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದರಿಂದ ತಪ್ಪಾಗಿದೆ. ಅದನ್ನು ತಿದ್ದುಕೊಳ್ಳುವ ವ್ಯವಸ್ಥೆ ಮಾಡುವುದಕ್ಕೋಸ್ಕರ ನ್ಯಾಯಾಂಗ ತನಿಖೆ ಮಾಡಬೇಕೆಂದು ಒತ್ತಾಯಿಸಿ ನಾನೂ ಕೂಡ ಧರಣಿಯಲ್ಲಿ ಪಾಲ್ಗೊಳ್ಳುತ್ತೇನೆ.

(ಮಾನ್ಯ ಪುಟ್ಟಣ್ಣಯ್ಯನವರು ವೆಲ್‌ನಲ್ಲಿ ಬಂದು ಕುಳಿತರು)

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೆ, ಸರಕಾರದ ವತಿಯಿಂದ ನಾವು ಈಗಾಗಲೇ ಸ್ಪಷ್ಟ ಮಾಡಿದ್ದೇವೆ. ಇದರಲ್ಲಿ ಯಾವುದೋ ಕಾರಣಕ್ಕೋಸ್ಕರ ಯಾರಿಗೋ ರಕ್ಷಣೆ ಕೊಡುವುದಕ್ಕೋಸ್ಕರ ಇದನ್ನು ಮಾಡಿದ್ದೇವೆಂದು ಹೇಳುವುದಾದರೆ ಆ ಜಮೀನನ್ನು ಸರಕಾರ ಕೈಗೆತ್ತಿಕೊಳ್ಳುವ ಕೆಲಸವನ್ನು ಮಾಡುತ್ತಿರಲಿಲ್ಲ. ಸರಕಾರಕ್ಕೆ ಬರತಕ್ಕಂತಹ ಹಣವನ್ನು ವಸೂಲಿ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಸರಕಾರದ ಪ್ರಾಮಾಣಿಕ ಕೆಲಸಕ್ಕೆ ವಿರೋಧ ಪಕ್ಷದಲ್ಲಿ ಕುಳಿತ ತಾವು ಮೆಚ್ಚಬೇಕು. ಅದನ್ನು ಬಿಟ್ಟು ಒಳ್ಳೆ ಕೆಲಸ ಮಾಡಿದಾಗಲೂ ಕೂಡ ನಮಗೆ ಶಹಭಾಸ್‌ಗಿರಿ ಕೊಡದಿದ್ರೆ ಹೇಗೆ? ಈ ಕೆಲಸ ಮಾಡಿದ್ದಕ್ಕೆ ವಿರೋಧ ಪಕ್ಷದಲ್ಲಿ ಕುಳಿತ ತಾವುಗಳು ಮೆಚ್ಚಬೇಕು. ರೈತರ ಜಮೀನನ್ನು ನಾವು ಉಳಿಸಿದ್ದೇವೆ. ಇದರಿಂದ ಬರತಕ್ಕಂತಹ ಹಣವನ್ನು ವಸೂಲಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

SRI KAGODU THIMMAPPA:- Communication of the